



ಕಳೆದ ವರ್ಷ ನವೆಂಬರ್‌ನಲ್ಲಿ ನೇಪಾಳದಲ್ಲಿ ನಡೆದ ಅಂಧ ಮಹಿಳೆಯರ ಟಿ–20 ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾರತ ವಿಶ್ವಕಪ್ ಗೆದ್ದು ಇತಿಹಾಸವನ್ನು ನಿರ್ಮಿಸಿತ್ತು. ಕರ್ನಾಟಕದ ಶಿರಾ ಮೂಲದ ದೀಪಿಕಾ, ತಂಡದ ನಾಯಕಿ ಆಗಿದ್ದರು. ಕೇರಳದಲ್ಲಿ ಮೊದಲ ಅಂಧ ಮಹಿಳಾ ಜಡ್ಜ್ ನೇಮಕ ಆಗಿದ್ದಾರೆ. ದೇಶದ ನ್ಯಾಯಾಂಗ ಇತಿಹಾಸದಲ್ಲಿ ಮೊದಲ ಅಂಧ ಸಿವಿಲ್ ನ್ಯಾಯಾಧೀಶೆ ಎಂಬ ಅಧ್ಯಾಯವನ್ನು ಬರೆದ ಕೀರ್ತಿ ತಾನ್ಯಾ ನಾಥನ್ ಅವರಿಗೆ ಸಲ್ಲುತ್ತದೆ. 'ಕಣ್ಣೋಟದ ಶಕ್ತಿ ಕುಂದಿದರೇನಂತೆ, ಬುದ್ಧಿ–ಭಾವದ ನೋಟಕ್ಕೆ ಬಂದ ಕುಂದಾದರೂ ಏನು' ಎನ್ನುವ ಪ್ರಶ್ನೆಗೆ ಬೆಂಗಳೂರಿನ 'ದೀಪಾ ಅಕಾಡೆಮಿ' ವಿದ್ಯಾರ್ಥಿಗಳು ವಿಜ್ಞಾನ ವಸ್ತು ಪ್ರದರ್ಶನದ ಮೂಲಕ ಉತ್ತರಿಸಿ, ಸೈ ಅನ್ನಿಸಿಕೊಂಡಿದ್ದಾರೆ.




ಪರಿಣಾಮಕಾರಿ ಮಾಡಬಹುದು ಎಂಬ ಕುತೂಹಲದ ಈ ಪ್ರಯತ್ನ ಯಶಸ್ವಿಯಾಗಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ 'ಅವಿರತ' ಆ ಕೆಲಸ ಮಾಡಿದೆ. 'ವಿಶೇಷ ಕಾಳಜಿ ಬೇಕಾದ ಮಕ್ಕಳನ್ನೂ ಒಳಗೊಳ್ಳಬೇಕು ಎನ್ನುವ ಚಿಂತನೆ ಚಿಗುರೊಡೆದ ನಂತರ ಈ ಕಾರ್ಯಯೋಜನೆಯನ್ನು ಎರಡು ವರ್ಷಗಳ ಹಿಂದೆ ವಿಸ್ತರಿಸಲಾಯಿತು. ಆ ಕಾರಣಕ್ಕೆ ಮಾನಸಿಕ ಮತ್ತು ದೈಹಿಕ ನ್ಯೂನತೆ ಇರುವ ಮಕ್ಕಳು ಈ ಚಟುವಟಿಕೆಯ ಭಾಗವಾದರು' ಎನ್ನುತ್ತಾರೆ ಸಂಸ್ಥೆಯ ಸವಿತಾ ಶರತ್.

ಅಂಧ ಮಕ್ಕಳಿಗೆ ಪ್ರಯೋಗಾಲಯ ಉಪಕರಣ, ಕ್ರೀಡೋಪಕರಣವನ್ನು ವಿತರಿಸುವ ಜೊತೆಗೆ, ಅರ್ಥ ಆಗುವಂತೆ ಬೋಧಿಸಬೇಕು. ಈ ದೃಷ್ಟಿಯಿಂದ 'ದೀಪಾ ಅಕಾಡೆಮಿ'ಯನ್ನು ಅವಿರತ ಆಯ್ಕೆ ಮಾಡಿಕೊಂಡಿತು. ವಿಜ್ಞಾನದಲ್ಲಿ ಚಿತ್ರಗಳ ರಚನೆ, ಪ್ರಯೋಗಗಳನ್ನು ಅವರಿಗೆ ಹೇಗೆ ತೋರಿಸುವುದು ಎನ್ನುವ ಪ್ರಶ್ನೆ ಕಾಡಿದೆ. ಅದಕ್ಕೆ ಉತ್ತರವನ್ನು ಕಂಡುಕೊಳ್ಳುವ ಸಂಬಂಧ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಮಾಡ್ಯುಲ್ ಮಾಡಿದ್ದಾರೆ. ಅದಕ್ಕೆ ಬೇಕಾದ ಬಾರ್‌ಗ್ರಾಫ್, ಪೈ ಚಾರ್ಟ್ ಸಿದ್ಧಪಡಿಸಿ ಬೋಧನೆ ಮಾಡಿದಾಗ ಪ್ರತಿ ಮಕ್ಕಳಿಗೆ ಮುಟ್ಟಿದ ತಕ್ಷಣ ಅವರಿಗೆ ಅದರ ಸ್ವರೂಪ ಗೊತ್ತಾಗಿದೆ. ಅದನ್ನು 'ಟ್ಯಾಕ್ಟೈಲ್ ಮಾಡೆಲ್' ಎನ್ನುತ್ತಾರೆ. ಒದಗಿಸಿದ ಪರಿಕರಗಳನ್ನು ಮಕ್ಕಳು ಖುಷಿಯಿಂದ ಸ್ಪರ್ಶಿಸಿ ಕಲಿಯಲು ಸಾಧ್ಯ ಆಗಿದೆ. ಇದೇ ತಂತ್ರವನ್ನು ವಿಜ್ಞಾನ ಮತ್ತು ಗಣಿತ ವಿಷಯಗಳಿಗೂ ವಿಸ್ತರಿಸಿದ್ದಾರೆ. ನಂತರ ರೇಖಾಗಣಿತದ ಕೋನಗಳ ಮಾಪನವನ್ನು ಸಮರ್ಪಕವಾಗಿ ಮಾಡಬಲ್ಲರು. ಜೀವಶಾಸ್ತ್ರ, ಭೌತಶಾಸ್ತ್ರದಲ್ಲಿಯೂ ಈ ಪ್ರಯೋಗ ಯಶಸ್ವಿಯಾಯಿತು. ವಿದ್ಯಾರ್ಥಿಗಳು ಕಲಿತ ಕೌಶಲ್ಯವನ್ನು ಪ್ರದರ್ಶನ ಮಾಡಬೇಕು ಎಂದು ಯಶಸ್ವಿ ವಿಜ್ಞಾನ ವಸ್ತುಪ್ರದರ್ಶನವನ್ನು ನಡೆಸಿದ್ದಾರೆ.





> ಕಾರ್ಪೊರೇಟ್ ಕಂಪನಿಯ ಉದ್ಯೋಗಿ. ಒಂದು ದಶಕದಿಂದ 'ಅವಿರತ' ಟ್ರಸ್ಟ್‌ನ ಕ್ರಿಯಾಶೀಲ ಸ್ವಯಂಸೇವಕಿ ಆಗಿದ್ದೇನೆ. ನಮ್ಮ ಸಂಸ್ಥೆ ಆರಂಭದಲ್ಲಿ ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಯ ಮಕ್ಕಳಿಗೆ ನೋಟ್ ಬುಕ್ ವಿತರಣೆ ಮಾಡುವ ಕಾರ್ಯವನ್ನು ಆರಂಭಿಸಿತು. ಕಳೆದ ಬಾರಿ 520 ಶಾಲೆಗಳಿಗೆ 60 ಸಾವಿರ ನೋಟ್ ಬುಕ್ ವಿತರಿಸಿದ್ದೇವೆ. ಅದನ್ನು ಅಂಧ ಮತ್ತು ಬುದ್ಧಿಮಾಂದ್ಯ ಮಕ್ಕಳಿಗೂ ವಿಸ್ತರಿಸಬೇಕು ಎಂದು ತನ್ನ ಕಾರ್ಯವ್ಯಾಪ್ತಿಯನ್ನು ಕಳೆದ ಎರಡು ವರ್ಷದಿಂದ ವಿಸ್ತರಿಸಿತು. ವಿಜ್ಞಾನ ಬದುಕಿನ ಭಾಗ. ಅದು ನಿತ್ಯವೂ ನಮ್ಮ ಅನುಭವಕ್ಕೆ ಬರುತ್ತಲೇ ಇರುತ್ತದೆ ಅದನ್ನು ದೃಷ್ಟಿ ಇಲ್ಲದ ಮಕ್ಕಳ ಅನುಭವಕ್ಕೂ ತರಬೇಕು. ಪ್ರಯೋಗಗಳನ್ನು ಸ್ವಂತ ಅವರೇ ಮಾಡುವಂತೆ ಆಗಬೇಕು ಎನ್ನುವ ಯೋಚನೆಯಿಂದ ಮಾಡಿದ ತಾಲೀಮಿನಿಂದಾಗಿ ಫೆಬ್ರುವರಿ 14ರಂದು ನಡೆಸಿದ ವಸ್ತು ಪ್ರದರ್ಶನವನ್ನು ಯಶಸ್ವಿಗೊಳಿಸಿದೆವು. ಖಗೋಳ ವಿಜ್ಞಾನ, ಗಣಿತ ಸೇರಿದಂತೆ ವಿಜ್ಞಾನದ ವಿವಿಧ ಪ್ರಯೋಗಾಲಯದ ವಸ್ತುಗಳ ಪರಿಚಯ 'ದೀಪ' ಅಂಧ ವಿದ್ಯಾರ್ಥಿಗಳಿಗೆ ಆಗಿದೆ.
>
> —ಸವಿತಾ ಶರತ್
> ಅವಿರತ ಸ್ವಯಂಸೇವಕಿ

ವಸ್ತು ಪ್ರದರ್ಶನ ಎರಡು ತಿಂಗಳ ಪ್ರಯತ್ನದಿಂದ ಕೈಗೂಡಿತು. ವಿದ್ಯಾರ್ಥಿಗಳು ಅಚ್ಚುಕಟ್ಟಾಗಿ ನಿರ್ವಹಿಸಿದ್ದು ಅವರ ಒಳಗೊಳ್ಳುವಿಕೆ ಮತ್ತು ಏನಾದರೂ ಮಾಡಬಲ್ಲರು ಎನ್ನುವುದನ್ನು ತೋರಿಸುತ್ತದೆ.

ಬೆಂಗಳೂರಿನ ಕಬ್ಬನ್ ಪಾರ್ಕ್‌ನ ಪ್ರಿಯದರ್ಶಿನಿ ಇಂದಿರಾಗಾಂಧಿ ಮಕ್ಕಳ ಗ್ರಂಥಾಲಯದಲ್ಲಿನ ಬ್ರೈಲ್ ಲಿಪಿಯ ಪ್ರಿಂಟರ್ ಸಹಾಯದಿಂದ ಅಂಧ ವಿದ್ಯಾರ್ಥಿಗಳು ಅಂತರ್ಜಾಲವನ್ನೂ ಜಾಲಾಡಬಲ್ಲರು. ತಮ್ಮ ಜ್ಞಾನ ಮತ್ತು ಅರಿವಿನ ಪರಧಿಯನ್ನು ವಿಸ್ತರಿಸಲು ಆಧುನಿಕ ತಂತ್ರಜ್ಞಾನವನ್ನೂ ಸಮರ್ಥವಾಗಿ ನಿಭಾಯಿಸಬಲ್ಲರು. ಹುಳಿಯೊಂದು ನಾಲಿಗೆ ಸೋಕಿದರೆ ಅದು ಯಾವ ಆ್ಯಸಿಡ್ ಎನ್ನುವ ಖಚಿತ ನಿರ್ಣಯವನ್ನು ಇಲ್ಲಿನ ಮಕ್ಕಳು ಮಾಡಬಲ್ಲರು. ಹೃದಯದ ಸ್ವರೂಪ ಮತ್ತು ಕಾರ್ಯವಿಧಾನವನ್ನೂ ಪ್ರಾತ್ಯಕ್ಷಿಕೆ ಮೂಲಕ ವಿವರಿಸುತ್ತಿದ್ದಾರೆ. ■